ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

<u>ಸಿ.ಸಿ ನಂಃ **6236/2023**</u>

| | | |
|---|---|---|
| ಸಾಕ್ಷಿಯ ಹೆಸರುಃ | ಹೇಮಲತಾ | ಪ್ರಾಸಾಃ 1 |
| ಗಂಡನ/ತಂದೆಯ ಹೆಸರುಃ | ತಿಮ್ಮಪ್ಪ | ಚಾಸಾಃ 1 |
| ವಯಸ್ಸುಃ | 30 ವರ್ಷ | ದಿಃ 09-01-2025 |
| ಉದ್ಯೋಗಃ | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದೇವಸೂಗೂರು | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ಚಾಸಾಃ 10 ನನ್ನ ಮಾವ. ಚಸಾಃ 11 ನನ್ನ ಮೈದುನ. ಚಾಸಾಃ 4 ನನ್ನ ಅತ್ತೆ. ನನಗೆ ಚಾಸಾಃ 7 ಮತ್ತು 8 ರವರು ಹಾಗೂ ಆರೋಪಿತರ ಪರಿಚಯವಿದೆ. ಸುಮಾರು 5-6 ವರ್ಷದ ಹಿಂದೆ ನನ್ನ ಗಂಡ ತಿಮ್ಮಪ್ಪ ಸೈದಾಪೂರಕ್ಕೆ ಕೆಲಸಕ್ಕೆ ಹೋಗಿರುತ್ತಾರೆ. ಅಲ್ಲಿಂದ ನನಗೆ ಶಕ್ತಿ ನಗರಕ್ಕೆ ಕೆಲಸಕ್ಕೆ ಹೋಗುತ್ತೇನೆ ಎಂದು ಕರೆ ಮಾಡಿ ತಿಳಿಸಿರುತ್ತಾನೆ. ನಂತರ ಕಡೆಚೂರು ಗೇಟ ಹತ್ತಿರ ಅಪಘಾತವಾಗಿರುತ್ತದೆ ಎಂದು ನನಗೆ ಚಾಸಾಃ 8 ರವರು ತಿಳಿಸಿರುತ್ತಾರೆ. ವೆಂಕಟೇಶ ಇವರು ಚಾಸಾಃ 8 ರವರಿಗೆ ಮಾಹಿತಿ ತಿಳಿಸಿರುತ್ತಾರೆ. ನಾನು ಮನೆಯಿಂದ ಸೈದಾಪೂರಕ್ಕೆ ಹೋಗಿ ಕಡೆಚೂರಕ್ಕೆ ಹೋಗಿರುತ್ತೇನೆ. ಘಟನೆ ಸ್ಥಳಕ್ಕೆ ಹೋದಾಗ ನನ್ನ ಗಂಡ ಇರಲಿಲ್ಲ. ಆಗ ಚಾಸಾಃ 8 ರವರು ಅಂಬುಲೇನ್ಸ ಮುಖಾಂತರ ನನ್ನ ಗಂಡನಿಗೆ ಒಯ್ಯುತ್ತಿದ್ದೇವೆ ಎಂದು ಹೇಳಿರುತ್ತಾರೆ. ರಾಯಚೂರ ಆಸ್ಪತ್ರೆಗೆ ಹೋಗುವಾಗ ರಸ್ತೆಯ ಮದ್ಯದಲ್ಲಿ ಮರಣ ಹೊಂದಿರುತ್ತಾರೆ. ನಾನು ನನ್ನ ಗಂಡನನ್ನು ನೋಡಿ ಆಸ್ಪತ್ರೆಯಿಂದ ಹೊರಗೆ ಬಂದಿರುತ್ತೇನೆ. ನಂತರ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರು ಗೈರು ಹಾಜರು ಇರುತ್ತಾರೆ. ಸದರಿ ಆರೋಪಿತನನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ವಕೀಲರು ತಮ್ಮ ಅರ್ಜಿಯಲ್ಲಿ ನಮೂದಿಸಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

1. ದಿನಾಂಕಃ 03-10-2023 ರಂದು ಬೆ. 6.00 ಗಂಟೆಗೆ ನನ್ನ ಗಂಡ ಕೆಲಸಕ್ಕಾಗಿ ಸೈದಾಪೂರಕ್ಕೆ ಹೋಗಿರುತ್ತಾನೆ ಎಂದರೆ ಸರಿ. ಬೆ. 10.30 ಕ್ಕೆ ಚಾಸಾಃ 8 ರವರು ಅಪಘಾತವಾಗಿದ್ದರ ಬಗ್ಗೆ ನನಗೆ ಮಾಹಿತಿ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಗಾಡಿ ಮತ್ತು ಟ್ರ್ಯಾಕ್ಟರ ಜಕಮ್ ಆಗಿ ನಿಂತಿದ್ದವು ಎಂದರೆ ಸರಿ. ಸದರಿ ವಾಹ ನಂಬರ 33-ಯು-3662 ಇರುತ್ತದೆ ಎಂದರೆ ಸರಿ. ಟ್ರ್ಯಾಕ್ಟರ ನಂಬರ ಕೆಎ-33-ಟಿಎ-7542 ಎಂದರೆ ಸರಿ.

2. ನನ್ನ ಗಂಡನನ್ನು ನೋಡಿದಾಗ ಅವರ ಮುಖಕ್ಕೆ ಮತ್ತು ಹಣೆಗೆ, ಬಲಗೈ ಭುಜದ ಹತ್ತಿರ ಎಲುಬು ಮುರಿದಿರುತ್ತದೆ ಎಂದರೆ ಸರಿ. ಚಾಸಾಃ 8 ರವರಿಗೆ ಅಪಘಾತದ ಬಗ್ಗೆ ವಿಚಾರಿಸಿರುತ್ತೇನೆ ಎಂದರೆ ಸರಿ. ಸದರಿ ಟ್ರ್ಯಾಕ್ಟರ ಅತೀವೇಗವಾಗಿ ಚಲಾಯಿಸಿಕೊಂಡು ನನ್ನ ಗಂಡನಿಗೆ ಅಪಘಾತ ಮಾಡಿರುತ್ತಾರೆ ಎಂದು ಚಾಸಾಃ 7 ರವರು ತಿಳಿಸಿರುತ್ತಾರೆ ಎಂದರೆ, ಚಾಸಾಃ 8 ರವರು ನನಗೆ ಹೇಳಿರುತ್ತಾರೆ ಎಂದರೆ ಸರಿ. ಸದರಿ ಟ್ರ್ಯಾಕ್ಟರ ಚಾಲಕ ಅಪಘಾತವಾದ ನಂತರ ಓಡಿ ಹೋಗಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ವಿಷಯ ತಿಳಿದು ನಾನು ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಅದೇ ದಿನ ಶವಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಶವಪಂಚನಾಮೆಯನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಮತ್ತು ಶವಪಂಚನಾಮೆಗೆ ತೆಗೆದುಕೊಂಡ ಫೋಟೋಗಳನ್ನು ನಿಪಿ-3 ರಿಂದ ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-4(ಎ) ಮತ್ತು ನಿಪಿ-5(ಎ) ಎಂದು ಗುರುತಿಸಲಾಯಿತು.

3. ದಿನಾಂಕಃ 07-10-2023 ರಂದು ಪೊಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಮರು ಹೇಳಿಕೆಯಲ್ಲಿ ವಾಹನ ಸಂಖ್ಯೆಯನ್ನು ಸರಿಯಾಗಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ಚಾಲಕ ಹೆಸರು ಮತ್ತು ನಂಬರ ಹೇಳಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲು ಃಆರೋಪಿ ಪರ ಶ್ರೀ. ಎ. ಎಮ್. ಜಿ. ವಕೀಲರಿಂದಃ

1. ನನ್ನ ಗಂಡ ಸೈದಾಪೂರದಲ್ಲಿ ಕೆಲಸ ಮಾಡುತ್ತಿದ್ದನು. ಸದರಿ ಅಪಘಾತವಾದ ವಾಹವನ್ನು ದಿನಾಲೂ ಕೆಲಸಕ್ಕಾಗಿ ಬಳಸುತ್ತಿದ್ದನು. ಅಪಘಾತವನ್ನು ನಾನು ಕಣ್ಣಾರೇ ನೋಡಿರುವುದಿಲ್ಲ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಟ್ರ್ಯಾಕ್ಟರ ಚಾಲಕನನ್ನು ಇಲ್ಲಿಯವರೆಗೆ ನಾನು ನೋಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನನ್ನ ಗಂಡನ ವಾಹನಕ್ಕೆ ಚಾಲನಾ ಪ್ರಮಾಣ ಪತ್ರ ಮತ್ತು ವಿಮೆ ಇರಲಿಲ್ಲ ಎಂದರೆ ಸಾಕ್ಷಿಯು ವಿಮೆ ನನ್ನ ಮಾವನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಗಂಡನ ಚಾಲನಾ ಪ್ರಮಾಣ ಪತ್ರ ಇರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಗಂಡ ಗಾಡಿ ಮೇಲೆ ಬಿದ್ದು ಮರಣ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ಸದರಿ ನಾನು ಟ್ರ್ಯಾಕ್ಟರ ಈ ಅಪಘಾತಲ್ಲಿ ಸಂಬಂಧವಿಲ್ಲದೆ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ನಾವೇ ಟೈಪ ಮಾಡಿಸಿರುತ್ತೇವೆ. ನಿಪಿ-1 ನ್ನು ರಾಯಚೂರಿನಲ್ಲಿ ತಯಾರಿಸಿರುತ್ತೇವೆ. ಸದರಿ ವಕೀಲರು ನಿಪಿ-1 ನ್ನು ತಯಾರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನನ್ನ ವಕೀಲರು ಅಪಘಾತವಾದಾಗ ರಾಯಚೂರಿಗೆ ಬಂದಿದ್ದರು ಎಂದರೆ ಸರಿ. ಸದರಿ ವಕೀಲರು ಈ ಅಪಘಾತದ ದೂರಿನ ಸಾರಾಂಶದ ಬಗ್ಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ.

2. ಯಾದಗಿರಿ ನ್ಯಾಯಾಲಯದಲ್ಲಿ ವಿಮಾ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅಪಘಾತವು ಟ್ರ್ಯಾಕ್ಟರ ಮೂಲಕ ಆಗಿರುವುದಿಲ್ಲ ನನ್ನ ಗಂಡನ ತಪ್ಪಿನಿಂದ ಆಗಿದ್ದು ಪರಿಹಾರಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂ: **6236/2023**

| | | |
|---|---|---|
| ಸಾಕ್ಷಿಯ ಹೆಸರು: | ಲಲಿತಮ್ಮ | ಪ್ರಾಸಾ: 2 |
| ಗಂಡನ/ತಂದೆಯ ಹೆಸರು: | ಕಿಷ್ಟಪ್ಪ | ಚಾಸಾ: 4 |
| ವಯಸ್ಸು: | 55 ವರ್ಷ | ದಿ: 09-01-2025 |
| ಉದ್ಯೋಗ: | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳ: | ದೇವಸೂಗೂರು | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :

ಚಾಸಾ: 1 ನನ್ನ ಸೊಸೆ. ನನಗೆ ಚಾಸಾ: 7 ರಿಂದ 9 ರವರ ಪರಿಚಯವಿಲ್ಲ. ಚಾಸಾ: 10 ನನ್ನ ಗಂಡ. ಚಸಾ: 11 ನನ್ನ ಮಗ. ಆರೋಪಿ ನಂಬರ 1 ರವರನ್ನು ನಾನು ನೋಡಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

1. ದಿನಾಂಕ: 03-10-2023 ರಂದು ನನ್ನ ಮಗ ಕೆಲಸಕ್ಕಾಗಿ ಸೈದಾಪೂರಕ್ಕೆ ಹೋಗಿರುತ್ತಾನೆ ಎಂದರೆ ಸರಿ. ನನಗೆ ಚಾಸಾ: 10 ಮತ್ತು 11 ರವರು ಫೋನು ಕರೆ ಮೂಲಕ ತಿಮ್ಮಪ್ಪನ ಅಪಘಾತವಾಗಿದ್ದರ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿ. ನನಗೆ ಒಂದು ಗಂಟೆಯ ನಂತರ ಚಸಾ: 10 ರವರು ಅಪಘಾತದಲ್ಲಿ ತಿಮ್ಮಪ್ಪ ಮರಣ ಹೊಂದಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಆಗ ನಾನು ಮತ್ತು ನನ್ನ ದೊಡ್ಡ ಮಗಳು ಹೋಗಿ ನೊಡಿದಾಗ ತಿಮ್ಮಪ್ಪನಿಗೆ ಮುಖಕ್ಕೆ, ಭುಜಕ್ಕೆ, ಹೊಟ್ಟೆಗೆ ಮತ್ತು ಕೈಗೆ ಗಾಯಗಳು ಆಗಿರುತ್ತದೆ ಎಂದರೆ ಸರಿ. ನನ್ನ ಸೊಸೆ ಚಾಸಾ: 1 ರವರು ಮೊದಲೆ ಆಸ್ಪತ್ರೆಯಲ್ಲಿ ಇದ್ದರು ಎಂದರೆ ಸರಿ. ನಾನು, ಚಾಸಾ: 10, 11 ರವರು ಚಾಸಾ: 8 ರವರಿಗೆ ಅಪಘಾತದ ಕುರಿತು ಕೇಳಿದಾಗ ಚಾಸಾ: 8 ರವರಿಗೆ ಚಾಸಾ: 7 ರವರು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ: 8 ರವರು ನನ್ನ ಗಂಡನಿಗೆ ಮತ್ತು ನನ್ನ ಮಗನಿಗೆ ತಿಳಿಸಿರುತ್ತಾರೆ. ನನ್ನ ಮಗ

ಮದ್ಯಾಹ್ನ 12.00 ಗಂಟೆಗೆ ಮರಣ ಹೊಂದಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ.

ಪಾಟಿ ಸವಾಲು ಃಆರೋಪಿ ಪರ ಶ್ರೀ. ಎ. ಎಮ್. ಜಿ. ವಕೀಲರಿಂದಃ

1. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **6236/2023**

| | | |
|---|---|---|
| ಸಾಕ್ಷಿಯ ಹೆಸರುಃ | ಕಿಷ್ಟಪ್ಪ | ಪ್ರಾಸಾಃ 3 |
| ಗಂಡನ/ತಂದೆಯ ಹೆಸರುಃ | ತಿಮ್ಮಪ್ಪ | ಚಾಸಾಃ 10 |
| ವಯಸ್ಸುಃ | 70 ವರ್ಷ | ದಿಃ 09-01-2025 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ದೇವಸೂಗೂರು | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ಸೊಸೆ. ಚಾಸಾಃ 4 ನನ್ನ ಹೆಂಡತಿ. ನನಗೆ ಚಾಸಾಃ 7 ರಿಂದ 9 ರವರ ಪರಿಚಯವಿದೆ. ಚಾಸಾಃ 11 ನನ್ನ ಮಗ. ಆರೋಪಿ ನಂಬರ 1 ರವರನ್ನು ನಾನು ನೋಡಿರುವುದಿಲ್ಲ. ನಾನು ಮತ್ತು ಚಾಸಾಃ 11 ರವರು ಕೆಲಸಕ್ಕೆ ಹೋಗಿರುವಾಗ, ಚಾಸಾಃ 1 ರವರು ನನಗೆ 11.00 ಗಂಟೆಗೆ ಕರೆ ಮಾಡಿ ತಿಮ್ಮಪ್ಪ ಅಪಘಾತದಲ್ಲಿ ಮರಣ ಹೊಂದಿರುತ್ತಾರೆ ಎಂದು ತಿಳಿಸಿರುತ್ತಾರೆ. ಆಗ ನಾನು ಮತ್ತು ಚಾಸಾಃ 11 ರವರು ರಾಯಚೂರಿಗೆ ಹೋಗಿ ಚಾಸಾಃ 4 ರವರಿಗೆ ಫೋನು ಮಾಡಿ ತಿಳಿಸಿರುತ್ತೇನೆ. ಆಗ ನನ್ನ ಇಬ್ಬರು ಹೆಣ್ಣುಮಕ್ಕಳು ರಾಯಚೂರಿಗೆ ಬಂದಿರುತ್ತಾರೆ. ನನ್ನ ಮಗನ ಮುಖ ನೋಡಿದಾಗ, ಮುಖಕ್ಕೆ, ಎದೆಗೆ, ಕೈಗೆ ಗಾಯವಾಗಿದ್ದು ಮತ್ತು ಬಲಗೈ ಮುರಿದಿರುತ್ತದೆ. ಸದರಿ ವಕೀಲರ ಜೊತೆ ಮಾತನಾಡಿ ಮರಳಿ ಬಂದಿರುತ್ತೇವೆ. ಪೊಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

1. ದಿನಾಂಕಃ 03-10-2023 ರಂದು ಈ ಘಟನೆ ನಡೆದಿರುತ್ತದೆ ಎಂದರೆ ಸರಿ. ಸದರಿ ಘಟನೆಯ ಬಗ್ಗೆ ಚಾಸಾಃ 8 ರವರಿಂದ ಮಾಹಿತಿ ಪಡೆದುಕೊಂಡಿರುತ್ತೇವೆ. ಆಗ ಚಾಸಾಃ 8 ರವರು ಚಾಸಾಃ 7 ರವರು ಟ್ರ್ಯಾಕ್ಟರ ಬಂದು ತಿಮ್ಮಪ್ಪನಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಆರೋಪಿತನು ಟ್ರ್ಯಾಕ್ಟರ ಬಿಟ್ಟು ಓಡಿ ಹೋಗಿರುತ್ತಾನೆ ಎಂದು

ಹೇಳಿರುತ್ತಾರೆ ಎಂದರೆ ಸರಿ. ಆರೋಪಿತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ಪೊಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟಿ ಸವಾಲು ಃಆರೋಪಿ ಪರ ಶ್ರೀ. ಎ. ಎಮ್. ಜಿ. ವಕೀಲರಿಂದಃ

1. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಆದರೆ ನನ್ನ ಸೊಸೆ ನನಗೆ ಹೇಳಿರುತ್ತಾಳೆ. ಈ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಆರೋಪಿ ನಂಬರ 1 ರವರನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಸದರಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ